# ಗುಣಮುಖಿ

## ಮನಿಷಾ ಬದುಕಿನ ಮತ್ತೊಂದು ಮುಖ

'ಬಾಂಬೆ', '1942 ಲವ್ ಸ್ಟೋರಿ'ಯಂಥ ಸಿನಿಮಾಗಳ ಮೂಲಕ ಹಲವರ ಹೃದಯದ ರಾಣಿಯಾಗಿದ್ದ ತಾರಾನಟಿ ಮನೀಷಾ ಕೊಯಿರಾಲಾ ನಮಗೆಲ್ಲರಿಗೂ ಗೊತ್ತು. ಆದರೆ, ಕ್ಯಾನ್ಸರ್‌ಗೆ ತುತ್ತಾಗಿ ಸಾವಿನ ಮನೆಯ ಹೊಸ್ತಿಲ ಮುಟ್ಟಿ ಬದುಕಿನೆಡೆಗೆ ಮುಟ್ಟಿಬಂದ ಹುಡುಗಿಯ ಹೋರಾಟದ ಕಥೆ ಎಷ್ಟು ಜನರಿಗೆ ಗೊತ್ತು? ಕ್ಯಾನ್ಸರ್ ಮಾರಿಯನ್ನು ತಾನು ಎದುರಿಸಿದ ಬಗೆ ಉಳಿದವರಿಗೂ ಪ್ರೇರಣೆಯಾಗಬೇಕು ಎಂಬ ಉದ್ದೇಶದಿಂದ ಅವರು **'ಹೀಲ್ಡ್: ಹೌ ಕ್ಯಾನ್ಸರ್ ಗೇವ್ ಮೀ ಎ ನ್ಯೂ ಲೈಫ್'** ಎಂಬ ಪುಸ್ತಕವನ್ನು ನೀಲಂಕುಮಾರ್ ಅವರೊಂದಿಗೆ ಬರೆದಿದ್ದಾರೆ. 'ಜೈಪುರ ಸಾಹಿತ್ಯೋತ್ಸವ 2019'ರಲ್ಲಿ 'ಸುಧಾ' ಪ್ರತಿನಿಧಿ **ಪದ್ಮನಾಭ ಭಟ್** ಅವರೊಂದಿಗೆ ತಮ್ಮ ಸ್ಫೂರ್ತಿಕಥನ ಹಂಚಿಕೊಂಡಿದ್ದಾರೆ.




◆ 'ಹೀಲ್ಡ್' ಪುಸ್ತಕದ ಬಗ್ಗೆ ಹೇಳಿ.

ಶೀರ್ಷಿಕೆಯೇ ಈ ಪುಸ್ತಕದ ಹೂರಣದ ಬಗ್ಗೆ ಹೇಳುತ್ತದೆ. ಇದು ಕಳೆದ ಆರು ವರ್ಷಗಳ ನನ್ನ ಬದುಕಿನ ಪಯಣದ ಕುರಿತಾದುದು. ಯಾವೆಲ್ಲ ಸನ್ನಿವೇಶದ ಮೂಲಕ ನಾನು ಹಾದು ಬಂದಿದ್ದೇನೆ; ಅವುಗಳನ್ನು ಎದುರಿಸಲು ಏನೆಲ್ಲ ಮಾಡಿದೆ ಎಂಬುದನ್ನು ಪುಸ್ತಕದಲ್ಲಿ ಬರೆದಿದ್ದೇನೆ. ಇದು ಮೂಲಭೂತವಾಗಿ ಆರೋಗ್ಯ ಮತ್ತು ಗುಣಮುಖರಾಗಿ ಬದುಕಿಗೆ ಮರಳುವ ಕಥನ.

◆ ಇಂಥದ್ದೊಂದು ಮಾರಣಾಂತಿಕ ಕಾಯಿಲೆ ನಿಮಗೆ ಇದೆ ಎಂದು ಗೊತ್ತಾದಾಗ ಮೊದಲು ನಿಮ್ಮ ಮನಸ್ಸಿಗೆ ಬಂದ ಆಲೋಚನೆ ಯಾವುದು?

ನನಗೆ ಕ್ಯಾನ್ಸರ್ ಇದೆ ಎಂದು ತಿಳಿದಾಗ ನಾನು ಏನನ್ನೂ ಯೋಚಿಸುವ ಸ್ಥಿತಿಯಲ್ಲಿ ಇರಲಿಲ್ಲ. ತಲೆಮೇಲೆ ಆಕಾಶವೇ ಕಳಚಿಬಿದ್ದಂತಾಗಿತ್ತು. ನಂತರ ಒಂದೇ ಒಂದು ಆಲೋಚನೆ ನನ್ನ ಮನಸಲ್ಲಿದ್ದಿದ್ದು 'ನನ್ನನ್ನು ನಾನು ಗುಣಪಡಿಸಿಕೊಳ್ಳಬೇಕು. ಅದಕ್ಕಾಗಿ ಸತತವಾಗಿ ಪ್ರಯತ್ನಿಸಬೇಕು' ಎನ್ನುವುದು. ಎಲ್ಲಿಯವರೆಗೆ ನನ್ನ ಈ ಪ್ರಯತ್ನ ಫಲ ನೀಡುತ್ತದೆ ಎಂದು ಗೊತ್ತಿರಲಿಲ್ಲ. ಚಿಕಿತ್ಸೆಯ ಪ್ರತಿ ಹಂತದಲ್ಲಿಯೂ ವೈದ್ಯರ ಬಳಿ 'ಡಾಕ್ಟರ್ ಹುಷಾರಾದೆನಾ?' ಎಂದು ಕೇಳುತ್ತಿದ್ದೆ. ಖಚಿತ ಉತ್ತರ ಸಿಗುತ್ತಿರಲಿಲ್ಲ. ನಿರಾಶೆಯಾಗುತ್ತಿತ್ತು. ಮತ್ತೊಂದಿಷ್ಟು ಪ್ರಯತ್ನಿಸೋಣ ಎಂದು ನನ್ನನ್ನು ನಾನೇ ಸಂತೈಸಿಕೊಳ್ಳುತ್ತಿದ್ದೆ.

◆ ನೀವು ಬಾಲಿವುಡ್ ನಟಿಯಾಗಿ ಪ್ರಸಿದ್ಧರಾದವರು. ನಿಮಗೆ ಕ್ಯಾನ್ಸರ್ ಇದೆ ಎಂದಾಗ ಬಾಲಿವುಡ್ ಬೆಂಬಲ ಹೇಗಿತ್ತು?

ಕಷ್ಟಕಾಲ ಬಂದಾಗ ಎಲ್ಲ ಜನರೂ ಜೊತೆಗಿರುವುದಿಲ್ಲ. ಅದರರ್ಥ ಅವರಿಗೆ ನನ್ನ ಬಗ್ಗೆ ಕಾಳಜಿ ಇಲ್ಲ ಎಂದಲ್ಲ. ನನ್ನನ್ನು ಪ್ರೀತಿಸುವುದಿಲ್ಲ ಎಂದೂ ಅರ್ಥವಲ್ಲ. ತುಂಬ ಜನರಿಗೆ ಇಂಥ ಸಂದರ್ಭದಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬ ಗೊಂದಲ ಇರುತ್ತದೆ. ನಾನು ಕ್ಯಾನ್ಸರ್ ಎದುರಿಸುವಾಗ ನನ್ನ ಕುಟುಂಬ ಜೊತೆಗಿತ್ತು. ನನಗಷ್ಟೇ ಸಾಕು.

◆ ಕೆಲವೇ ವರ್ಷಗಳ ಹಿಂದೆ ಯಾರಿಗಾದರೂ ಕ್ಯಾನ್ಸರ್ ಆದರೆ, ಆ ಸಂಗತಿಯನ್ನು ಸಮಾಜದಿಂದ ಮುಚ್ಚಿಡಲು ಪ್ರಯತ್ನಿಸುತ್ತಿದ್ದರು. ಇತ್ತೀಚೆಗೆ ಇರ್ಫಾನ್ ಖಾನ್ ತಮಗೆ ಕ್ಯಾನ್ಸರ್ ಆದ ಸಂಗತಿಯ ಕುರಿತು ಬಹಿರಂಗವಾಗಿ ಹೇಳಿಕೊಂಡರು. ಸೋನಾಲಿ ಬೇಂದ್ರೆ ಕೂಡ ಕ್ಯಾನ್ಸರ್ ಆಗಿರುವುದನ್ನು ಜಾಹೀರುಪಡಿಸಿದರು. ನೀವು ಪುಸ್ತಕವನ್ನೇ ಬರೆದಿದ್ದೀರಿ. ಇದರಿಂದ ಜನರಲ್ಲಿ ಅರಿವು ಮೂಡಬಹುದೇ?

ಎಲ್ಲರಿಗೂ ಅವರವರದ್ದೇ ಕಾರಣಗಳಿರುತ್ತವೆ. ನನಗೆ ಕಾಯಿಲೆ ಇದ್ದಾಗ ನಾನು ಕ್ಯಾನ್ಸರ್‌ನಿಂದ ಗುಣಮುಖರಾಗಿ ಬಂದವರ ಸ್ಫೂರ್ತಿಕಥನಗಳಿಗೆ ಹುಡುಕುತ್ತಿದ್ದೆ. ಸಿಕ್ಕಿದ್ದು ಬೆರಳೆಣಿಕೆಯಷ್ಟು ಕಥೆಗಳು ಮಾತ್ರ. ನಿರಾಶೆಯಾಯ್ತು,